ಎಷ್ಟೆಷ್ಟು ಬೇಕೋ ಅಷ್ಟು ಸಾಲವನ್ನು ಕೊಟ್ಟಿದ್ದಾರೆ. ಸಾಧಾರಣವಾಗಿ ದುಡ್ಡು ಇಲ್ಲದೆ ವಾಪಸ್ ಮಾಡುವುದಕ್ಕೆ ಶಕ್ತಿ ಇಲ್ಲದೇ ಇದ್ದವರು ಡಿಫಾಲ್ಟ್ ಆಗಿರಬಹುದು. ಮ್ಯಾನೇಜ್‌ಮೆಂಟ್‌ನವರು ಆಸಕ್ತಿವಹಿಸಿ, ಶ್ರದ್ಧೆವಹಿಸಿ ಕೆಲಸ ಮಾಡಿದೆಯೆಂದು ಇದರಲ್ಲಿ ಸರ್ಕಾರ ಕಾಣುತ್ತಿಲ್ಲ. ಬಹುಪಾಲು ಸೊಸೈಟಿ ಅಧ್ಯಕ್ಷರು, ತಾಲ್ಲೂಕುಬೋರ್ಡ್ ಅಧ್ಯಕ್ಷರು ಇದರಲ್ಲಿ ಅಧ್ಯಕ್ಷರಾಗಿದ್ದಾರೆ. ಸಿ ಐ ಒ. ಸೆಕ್ರೆಟರಿಯಾಗಿದ್ದರು. ಸಕಾಲದಲ್ಲಿ ಕೆಲಸ ಮಾಡಿದ್ದರೆ ಬಹುಮಟ್ಟಿಗೆ ಈ ಪರಿಸ್ಥಿತಿ ಬರುತ್ತಿರಲಿಲ್ಲ. ಆದುದರಿಂದ ೪ ಕೋಟಿ ರೂಪಾಯಿಗಳನ್ನು ಸರ್ಕಾರ ಏನು ಹಾಕಿದೆ ಅದು ವಾಪಸ್ ಬರದೇ ಇರುವುದರಿಂದ ಆ ಕಾರ್ಯ ಸ್ಥಗಿತವಾಗಿದೆ.

ಶ್ರೀ ಜೆ. ಎಲ್. ಕಬಾಡಿ. ಹರಿಜನ-ಗಿರಿಜನರಿಗೆ ಕೊಟ್ಟಿರತಕ್ಕ ಹಣ ವಾಪಸ್ ಬರುವುದಿಲ್ಲವೆಂದು ಸರ್ಕಾರಕ್ಕೆ ಖಾತರಿಯಾಗಿದೆ. ಅದಕ್ಕೋಸ್ಕರ ಸರ್ಕಾರದವರು ಸಬ್ಸಿಡಿ ಕೊಡುವ ಹಾಗೆ ಈ ಹಣವಿಂದ ಅವರನ್ನು ಪೂರ್ತಿ ವಜಾಮಾಡಿ, ಸಾಲದಿಂದ ವಿಮುಕ್ತರನ್ನಾಗಿ ಮಾಡುತ್ತೀರಾ ?

ಶ್ರೀ ಕೆ. ಎಚ್. ರಂಗನಾಥ್.—ಹಣ ಬರುವುದಿಲ್ಲವೆಂದು ಸರ್ಕಾರಕ್ಕೆ ಖಾತರಿಯಾಗಿಲ್ಲ.

ಶ್ರೀ ಎಸ್. ಎಂ. ಶೀರ್ವಾಳಿ ಚಂದ್ರಶೇಖರ್.—ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ಹಂತಹಂತವಾಗಿ ಮನೆಯನ್ನು ಕಟ್ಟಿಕೊಳ್ಳುವುದಕ್ಕೆ ಹಣವನ್ನು ಕೊಟ್ಟಿದ್ದೇವೆ ಎಂದು ಹೇಳಿದರು. ನನ್ನ ಪ್ರಶ್ನೆ ಏನೆಂದರೆ, ಮೊದಲನೆ ಕಂತು ದುಡ್ಡು ತೆಗೆದುಕೊಂಡು ಎರಡನೇ ಕಂತಿಗೆ ದುಡ್ಡು ಕೊಡುತ್ತಾ ಇಲ್ಲ, ಅರ್ಧಂಬರ್ಧ ಮನೆಗಳನ್ನು ಕಟ್ಟಿಸಿರುತ್ತಾರೆ. ಅದಕ್ಕೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ?

SRI K. H RANGANATH.—The Hon'ble. Member is not quite aware of the whole situation. I was submitting to the House that nearly round about 17,000 houses have been completed. The programme was to take up 2?,000 houses. ಹಣವನ್ನು ಹಂತಹಂತವಾಗಿ ಕೊಡುತ್ತಿದ್ದೇವೆ. ಎರಡನೇ ಕಂತನ್ನು ಕೊಡದೇ ಹೋಗಿಲ್ಲ ೧೭ ಸಾವಿರ ಮನೆಗಳು ಪೂರ್ತಿಯಾಗಿವೆ. ಮೊದಲನೇ, ಎರಡನೇ, ಮೂರನೇ ಕಂತಿನ ಹಣವನ್ನು ತೆಗೆದುಕೊಂಡಿದ್ದಾರೆ, ಮನೆಯನ್ನು ಕಟ್ಟಿದ್ದಾರೆ.

ಶ್ರೀ ಎಂ. ಎಚ್. ಜಯಂಪ್ರಕಾಶ್ ನಾರಾಯಣ್.—೨೨ ಸಾವಿರ ಮನೆಗಳಲ್ಲಿ ೧೭ ಸಾವಿರ ಮನೆಗಳನ್ನು ಕಟ್ಟಿದ್ದೆವೆಂದು ಅಫ್ಟಣೆ ಕೊಡಿಸಿದ್ದೀರಿ ಆದರೆ ೩,೯೦೦ ಮನೆಗಳು ಅರ್ಧಬಂರ್ದವಾಗಿದೆ ಯೆಂದು ಹೇಳಿದಿರಿ. ಅರ್ಧಂಬರ್ದ ಆಗಿರತಕ್ಕ ಮನೆಗಳಿಗೆ ಸರ್ಕಾರದವರು ಆದಷ್ಟು ಜಾಗ್ರತೆ ದುಡ್ಡನ್ನು ಒದಗಿಸಿ ಪೂರೈಸುವುದಕ್ಕೆ ಪ್ರಯತ್ನ ಮಾಡುತ್ತೀರಾ ಸ್ವಾಮಿ ?

ಶ್ರೀ ಕೆ. ಎಚ್. ರಂಗನಾಥ್.—ಕಂತು ಹಣ ವಾಪಸ್ ಬಂದಿದ್ದರೆ ಆದನ್ನು ಪೂರ್ತಿ ಮಾಡಬಹುದಾಗಿತ್ತು. ಎಲ್. ಐ. ಸಿ. ಯಿಂದ ತಂದ ಸಾಲವನ್ನು ಕೊಟ್ಟು ಮನೆಗಳು ಅಷ್ಟಕ್ಕೆ ನಿಂತಿರುವುದರಿಂದ ಎಲ್.ಐ.ಸಿ.ಯವರ ಕಂತನ್ನು ಕೊಡಲಿಕ್ಕೆ ಸಾಧ್ಯವಾಗುವುದಿಲ್ಲ. ಆದುದರಿಂದ ಮಾನ್ಯ ಸದಸ್ಯರು ಏನು ಹೇಳುತ್ತಿದ್ದಾರೆ, ಅದರ ಬಗ್ಗೆ ಕಾರ್ಯಕ್ರಮ ತೆಗೆದುಕೊಳ್ಳಲಿಕ್ಕೆ ಸಾಧ್ಯವಾಗುವುದಿಲ್ಲ.

Improvement in Public Relation

414. SRI K. R. SRINIVASULU NAYUDU (Shanthinagar) —Will the Chief Minister be pleased to state:—

(*a*) whether there is any programme before the Government to improve the public relation activity in the State ;

(*b*) if so, the steps taken in this direction so far ;

(*c*) whether there is any programme included in the five year plan in this matter?

SRI H. S. CHANNABASAPPA (Minister for Public works). [On behalf of. SRI D. DEVARAJ URS (Chief Minister)].—

(*a*) Yes.

(*b*) Copies of Circular No GAD 75 MAR 75 dated 17th December 1975 and No GAD 78 MAR 75 dated 22nd December 1975 are placed on the table of the houses * which indicate the existing arrangements for attending to grievances of the public and for providing them with necessary assistance. The Department of Information and Publicity has District Information Centres with Reading Room and Library facilities and an Information Centre is also located at Delhi. Audio and Visual Publicity in the Rural and Urban Areas is provided by means of mass media like Press, Radio, Films, Exhibition and Song and Drama, etc.

(*c*) In the Fifth Plan it is proposed to intensify the activities of the Information and Publicity Department. It is proposed to establish a Research and Reference Cell to start Training and Familiarisation Scheme for the staff. It is also proposed to start additional Information Centres as Taluk Level.

ಶ್ರೀ ಕೆ. ಆರ್. ಶ್ರೀನಿವಾಸಲು ನಾಯ್ಡು.— ಸಾರ್ವಜನಿಕರ ಮುಖ್ಯ ಕುಂದುಕೊರತೆಗಳನ್ನು ಗಮನಿಸಲು ಒಂದು ಸೂಟಬಲ್ ಮಿಷನರಿ ಮಾಡಬೇಕು ಎಂದು ಯೋಚನೆ ಮಾಡಿದ್ದೀರಿ. ಅದರ ರೂಪುರೇಷೆ ಯಾವ ತರಹ ಇರುತ್ತದೆ ಎನ್ನುವುದರ ಬಗ್ಗೆ ವಿವರಣೆ ಕೊಡುತ್ತೀರಾ ?

† ಶ್ರೀ ಎಚ್. ಎಂ. ಚನ್ನಬಸಪ್ಪ.— ಸ್ಟೇಟ್ ಲೆವೆಲ್‌ನಲ್ಲಿ, ಸೆಕ್ರಟರಿಯೇಟ್ ಲೆವೆಲ್‌ನಲ್ಲಿ, ಡಿವಿಜನಲ್ ಲೆವೆಲ್‌ನಲ್ಲಿ, ಡಿಸ್ಟ್ರಿಕ್ಟ್ ಲೆವೆಲ್‌ನಲ್ಲಿ ಮತ್ತು ತಾಲ್ಲೂಕ ಲೆವೆಲ್‌ನಲ್ಲಿ ಯಾವ ಯಾವ ರೀತಿ ಸಂಪರ್ಕವನ್ನು ಹೆಚ್ಚು ಮಾಡಬೇಕು ಎನ್ನುವುದರ ಬಗ್ಗೆ ಮಿಷನರಿಯನ್ನು ನೂಚನೆ ಮಾಡಿ ಆ ನೂಚನೆಯನ್ನು ಅಧಿಕಾರಿಗಳಿಗೆ ಕೊಟ್ಟಿದ್ದೇವೆ. ನಾವು ಏನು ನೂಚನೆಗಳನ್ನು ಕೊಟ್ಟಿದ್ದೇವೆ ಅದರಂತೆ ಎಲ್ಲಾ ಮಟ್ಟಗಳನ್ನೂ ನಡೆಸಿಕೊಂಡು ಬರುತ್ತಿದ್ದಾರೆ.

ಶ್ರೀ ಕೆ. ಆರ್. ಶ್ರೀನಿವಾಸಲು ನಾಯ್ಡು.—ತಾಲ್ಲೂಕು ಮಟ್ಟದಲ್ಲಿ ಸೋಷಿಯಲ್ ಎಜುಕೇಷನ್ ಆಫೀಸರ್ ಎಂದು ಇರುತ್ತಾರೆ. ಅವರಿಗೂ ಮತ್ತು ವಾರ್ತಾ ಇಲಾಖೆಯವರಿಗೂ ನಿಕಟ ಸಂಬಂಧ ಬೆಳೆಸುವುದರಿಂದ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಆದುದರಿಂದ ಮುಂದೆ ಅವರಿಗೆ ಸಂಬಂಧ ಬೆಳೆಸುವುದಕ್ಕೆ ಪ್ರಯತ್ನ ಪಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.— ಸಾರ್ವಜನಿಕ ಕೆಲಸಗಳನ್ನು ಸುಲಭವಾಗಿ ನಡೆಯಿಸುವುವುದಕ್ಕೆ ಗ್ರೀವೆನ್ಸ್‌ಸ್ ಕೇಳಲಿಕ್ಕೆ ತಾಲ್ಲೂಕು ಮಟ್ಟದಲ್ಲಿ ಏನು ವ್ಯವಸ್ಥೆ ಮಾಡಬೇಕು ಎನ್ನುವುದನ್ನು ಸರ್ಕಾರ್ಯರ್ ಮುಖೇನ ಅಮಲ್ದಾರರುಗಳಿಗೆ ತಿಳಿಸಿದ್ದೇವೆ. ಅವರು ಆ ಬಗ್ಗೆ ನೂಕ್ತ ಕಾರ್ಯಕ್ರಮ ತೆಗೆದುಕೊಂಡಿದ್ದಾರೆ.

ಶ್ರೀ ಕೆ. ಆರ್. ಶ್ರೀನಿವಾಸಲು ನಾಯ್ಡು.— ಎಸ್ಟಾಬ್ಲಿಷ್ ಎ ರೀಸರ್ಚ್ ಅಂಡ್ ರೆಫೆರೆನ್ಸ್ ಸೆಲ್ ಎಂದು ಹೇಳಿದ್ದೀರಿ. ಅದು ಎಷ್ಟು ದಿವಸದಲ್ಲಿ ಅಸ್ತಿತ್ವದಲ್ಲಿ ಬರುತ್ತದೆ ಸ್ವಾಮಿ ?

ಶ್ರೀ ಎಚ್. ಎಂ. ಚನ್ನಬಸಪ್ಪ.— ಅದು ಆಗಲೇ ಆಗಿಹೋಗಿದೆ.

---

* Copy placed in the Karnataka Legislature library *vide* No. 38, dated 8th April 1976.